# 'ಗ' ಘ'  ಅಕ್ಷರದ ವಚನದ ಅರ್ಥ

1)ಗುರುವೆ ತೆತ್ತಿಗನಾದ. ಲಿಂಗವೆ ಮದವಣಿಗನಾ
ನಾನು ಮದವಣಿಗೆಯಾದೆ.
ಈಭುವನವೆಲ್ಲ ಅರಿಯಲು ಅಸಂಖ್ಯಾತರೆನಗೆ ತಾಯಿ ತಂದೆಗಳು
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ .ಚೆನ್ನಮಲ್ಲಿಕಾರ್ಜುನ
ಗಂಡನೆನಗೆ.
ಮಿಕ್ಕಿನ ಲೋಕದವರೆನಗೆ ಸಂಬಂಧವಿಲ್ಲಯ್ಯ.

## ಪದಗಳ ಅರ್ಥ

ತೆತ್ತಿಗ- ತಂದೆ, ಮಗಳನ್ನು ಲಗ್ನಮಾಡಿಕೊಡುವವ,ಇಲ್ಲಿ ಗುರು.
ಮದವಣಿಗ-ವರ,ಇಲ್ಲಿ ಪರಮಾತ್ಮ,
ಮದವಳಿಗೆ- ಪತ್ನಿ ಮದವಳಿದ ಶರಣಸತಿ,
ಭುವನ-ಲೋಕ,
ಸಾದೃಶ್ಯ-ಅನುರೂಪ, ಯೋಗ್ಯ, ಶ್ರೇಷ್ಠ

## ವಚನದ ಅರ್ಥ

ಗುರುವ ತೆತ್ತಿಗನಾದ ಲಿಂಗವೆ ಮದವಣಿಗನಾದ, ನಾನು ಮದವಣಿಗೆ ಯಾದೆನು ಗುರು ಲಗ್ನ ಮಾಡಿಕೊಡುವ ತಂದೆ. ಲಿಂಗ ಪರಮಾತ್ಮ ಚೆನ್ನಮಲ್ಲಿರ್ಕಾಜುರ್ನ ಗಂಡ. ನಾನು ಲಗ್ನವಾಗುವ ಪತ್ನಿ ವಧು.ಈ ಭುವನವೆಲ್ಲ ಅರಿಯಲು ಅಸಂಖ್ಯಾತರೆನಗೆ ತಾಯಿತಂದೆಗಳು. ಈ ಜಗತ್ತಿನಅಸಂಖ್ಯಾತರೆಲ್ಲರೂ ನನಗೆ ತಂದೆ ತಾಯಿಗಳು . ಕೊಟ್ಟರು ಸಾದೃಶ್ಯವಪ್ಪವರನ ನೋಡಿ. ಯೋಗ್ಯನಾದ ವರನಿಗೆ ನನ್ನನ್ನು ಲಗ್ನಮಾಡಿಕೊಟ್ಟರು. ಇದು ಕಾರಣ(ಚೆನ್ನಮಲ್ಲಿಕಾರ್ಜುನ ಗಂಡನೆನಗೆ ಈ ಕಾರಣವಾಗಿ ಚೆನ್ನಮಲ್ಲಿಕಾರ್ಜುನನೆ ನನ್ನ ಪತಿ ಮಿಕ್ಕಿನ ಲೋಕದವರೆನಗೆ ಸಂಬಂಧವಿಲ್ಲವಯ್ಯ. ಉಳಿದವರು ನನಗೆ ಸಂಬಂಧವಿಲ್ಲ.

ಪ್ರಭುದೇವರು, ಮಹಾದೇವಿಯಕ್ಕನವರ ನಡುವೆ ನಡೆದ ಅನುಭಾವ ಗೋಷ್ಠಿಯಲ್ಲಿ ಉತ್ತರಿಸಿದ ವಚನದಂತಿದೆ. ಲೋಕಾಪವಾದದ

ಮಾತುಗಳು ಮಹಾದೇವಿಯವರ ಮೇಲೆ ಬಂದಿದೆ.ಲಂಕೆಯಲ್ಲಿದ್ದ ಸೀತೆಯ ಮೇಲೆ ಲೋಕಾಪವಾದದ ಮಾತುಗಳು ಬಂದಂತೇ ನಿನ್ನ ಪತಿ ಯಾರು ಹೇಳು ಎಂದು ಕೇಳುವ ಮೂಲಕ ಲೋಕಕ್ಕೆ ಉತ್ತರ ಕೊಡಿಸಲಾಗಿದೆ. ಇಂತಹ ಮಾತುಗಳಿಗೆ ಮಹಾದೇವಿಯವರು ಹೆದರುವ ಹೆಣ್ಣಲ್ಲ. ಮತ್ತೆ ಮತ್ತೆ ಮನ ನೋಯುವ ಮಾತುಗಳು ಎದುರಾದಾಗ ಎದೆಯಲ್ಲಿ ನೋವು ಉಳಿದೆ ಬಿಡುತ್ತದೆ. ನಿನ್ನಪತಿ ಯಾರು ಎನ್ನುವ ಪ್ರಶ್ನೆಗೆ ಈ ವಚನ ಉತ್ತರ. ಮಹಾದೇವಿಯವರು ದೇಹ ಜೀವನ ನಡೆಸಲು ಬಂದವರಲ್ಲ. ದೇಹದೊಳಗಿನ ಪ್ರಾಣನ ಅನುಭಾವಜೀವನ ನಡೆಸಲು ಬಂದವರು. ನನಗೆ ಮದುವೆ ಆಗಿದೆ. ಆ ಮದುವೆ ದೇಹದ ಮದುವೆಯಲ್ಲ ಶರಣಸತಿ ಲಿಂಗಪತಿಯ ವರ್ಣನೆ ಅದು. ಗುರುವೆ ತೆತ್ತಿಗನಾದ. ಲಿಂಗವೆ ಮದವಣಿಗನಾದ. ನಾನು ಮದವಣಿಗೆಯಾದೆ. ಲಗ್ನ ಮಾಡಿದ ತಂದೆ ನನ್ನ ಗುರು. ನನ್ನ ಕೈ ಹಿಡಿದ ಪತಿ ಚೆನ್ನಮಲ್ಲಿಕಾರ್ಜುನ. ಈ ಭುವನವೆಲ್ಲ ಅರಿಯಲು ಅಸಂಖ್ಯಾತರೆನಗೆ ತಾಯಿತಂದೆಗಳು. ಈ ಜಗತ್ತೆ ತಿಳಿಯುವಂತೆ ಜಗತ್ತೆ ನನ್ನ ತಂದೆ ತಾಯಿಗಳು. ಇವರು ಯೋಗ್ಯನಾದ ವರನನ್ನು ಹುಡುಕಿ ಪರಮಾತ್ಮನೆಂಬ ವರ ನಿಗೆ ಕೊಟ್ಟು ಲಗ್ನ ಮಾಡಿದರು. ಅವನೊಂದಿಗೆ ಯೋಗ್ಯ ಒಗತನ ನಡೆಸಿದ್ದೇನೆ. ಉಳಿದ ಯಾರೂ ನನಗೆ ಸಂಬಂಧವಿಲ್ಲ. ಅಕ್ಕಮಹಾದೇವಿಯವರು ಅಷ್ಟೆ ನಿರ್ಲಿಪ್ತವಾಗಿ ಉತ್ತದಾರೆ.

2)ಗುರು ಪಾದ ತೀರ್ಥವೆ ಮಂಗಳ ಮಜ್ಜನವೆನಗೆ,
ವಿಭೂತಿಯೆ ಒಳಗುಂದದ ಆರಿಸಿನವೆನಗೆ
ದಿಗಂಬರವೆ ದಿವ್ಯಾಂಬರವೆನಗೆ.
ಶಿವಪಾದರೇಣುವೆ ಅನುಲೇಪನವೆನಗೆ
ರುದ್ರಾಕ್ಷಿಯೆ ಮೈದೊಡಿಗೆ ಎನಗೆ .
ಶರಣರ ಪಾದಂಗಳೆ ತೊಂಡಿಲ ಬಾಸಿಗವೆನಗೆ ಚೆನ್ನಮಲ್ಲಿಕಾರ್ಜುನ
ಎನ್ನ ಮದವಣಿಗ.
ಎನಗೆ ಬೇರ ಶೃಂಗಾರವೇಕೆ ಹೇಳಿರವ್ವ.

## ಪದಗಳ ಅರ್ಥ

ಪಾದತೀರ್ಥ- ಗುರುಪಾದದ ಎರಡು ಉಂಗುಷ್ಟಗಳನ್ನು ಪಾದಪೂಜೆಯನಂತರ ಕೇಂದ್ರವಾಗಿಸಿ ಅನುಗ್ರಹ ಜಲ ಪಡೆದುದು. ಪಾದೋದಕವನ್ನು ಗುರುಗಳು ಮಟ್ಟ ನಾದಿ ಪೂಜೆ ನಡೆಸಿದ

ಸ್ಥಳದಲ್ಲಿಯೇ ಪಡೆಯಬೇಕು ಗುರು ಹೊರಗೆ ಹೋಗಿದೆ. ಬಾರದು.
ಪ್ರಸಾದ ಸೇವಿಸಿರಬಾರದು. ಜಪತಪ ನಡೆಸಿರಬೇಕು.
ವಿಭೂತಿ-ಸಗಣಿ ಸುಟ್ಟ ಬೂದಿಯಿಂದ ಮಾಡಿದ್ದು. ಈಗ
ಸೀಮೆಸುಣ್ಣದ ಪುಡಿಯಿಂದ ಮಾಡುತ್ತಾರೆ.
ದಿವ್ಯಾಂಬರ-ಪವಿತ್ರ ಉಡುಗೆ. ಇಲ್ಲಿ ಬಯಲು ಉಡುಗೆ ರೇಣು-ಧೂಳು. ಅನು
ಲೇಪನ- ಶ್ರೀಗಂಧದ ಹಾಗೆ ಮೈಗೆಲ್ಲ ಪೂಸುವಂತದ್ದು: ಮೈದೊಡಿಗೆ-ಆಭರಣ

## ವಚನದ ಅರ್ಥ

ಗುರುಪಾದತೀರ್ಥವೆ ಮಗಳ ಮಜ್ಜನವೆನಗೆ. ಗುರುವಿನ ಪಾದೋದಕವೆ ನನಗೆ ಮಂಗಳ ಸ್ನಾನ. ವಿಭೂತಿಯೆ ನನಗೆ ಅಳಿಸಲಾಗದ ಅರಿಸಿನ. ದಿಗಂಬರವೆ ನನಗೆ ದಿವ್ಯಾಂಬರ. ಶಿವಶರಣರ ಪಾದಧೂಳಿಯೆ ಅಶೀರ್ವಾದ ರುದ್ರಾಕ್ಷಿಧಾರಣೆ ಆಭರಣ, ಶರಣರ ಪಾದಂಗಳೆ ತೊಂಡಿಲ ಬಾಸಿಗವೆನಗೆ. ಶರಣರು ಎಂದರೆ ಇಲ್ಲಿ ಗುರುಗಳು. ಅವರ ಪಾದುಕೆಗಳೆ ಬಾಸಿಂಗ.ನನಗೆ ಪರಮಾತ್ಮನ ವರ. ಇತರ ಶೃಂಗಾರಗಳೇಕೆ? ಲೌಕಿಕದ ಎಲ್ಲವೈಭವಗಳನ್ನು ಅಕ್ಕಮಹಾದೇವಿಯವರು ಅನುಭಾವ, ಅಷ್ಟಾವರಣ,ಧಾರ್ಮಿಕ ಲಾಂಛನಗಳಲ್ಲಿ ಗುರುತಿಸಿಕೊಳ್ಳುತ್ತಾರೆ.

3) ಗುರುವಿನ ಕರುಣದಿಂದ ಲಿಂಗ ಜಂಗಮವ ಕಂಡೆ.
ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ.
ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ.
ಚೆನ್ನಮಲ್ಲಿಕಾರ್ಜುನಯ್ಯ ನಾ ಹುಟ್ಟಲೊಡನೆ ವಿಭೂತಿಯ ಪಟ್ಟವ ಕಟ್ಟಿ,
ಲಿಂಗ ಸ್ವಾಯತವ ಮಾಡಿದ ನಾಗಿ ಧನ್ಯಳಾದೆನು.

## ಪದಗಳ ಅರ್ಥ

ಗೋಷ್ಠಿ-ಶಿವಾನುಭಾವ, ವಿಭೂತಿಯ ಪಟ್ಟ-ವಿಭೂತಿಧಾರಣೆ ಮತ್ತು, ಇಷ್ಟಲಿಂಗ ದೀಕ್ಷಾವಿಧಿಗೆ ಆರಂಭ.ಲಿಂಗ

ಸ್ವಾಯತ-ವೀರಶೈವ ಲಿಂಗಾಯತ ದೀಕ್ಷೆ.

## ವಚನದ ಅರ್ಥ

ಗುರುವಿನ ಕರುಣದಿಂದ ಲಿಂಗ ಜಂಗಮವ ಕಂಡೆ. ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ. ಗುರುವಿನ ಅನುಗ್ರಹ ಕಾರಣವಾಗಿ ಲಿಂಗ ಜಂಗಮದ ದರ್ಶನವಾಯಿತು. ಪಾದೋದಕ ಪ್ರಸಾದವನ್ನೂ ಪಡೆದೆ. ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಟಿಯ ಕಂಡೆ. ಗುರುಕಾರಣವಾಗಿ ಸಜ್ಜನರು ಸದ್ಭಕ್ತರು ಮತ್ತು ಶಿವಾನುಭಾವ ಗೋಷ್ಟಿಯನ್ನು ಕಂಡೆ. ನಾಹುಟ್ಟಲೊಡನೆ ಶ್ರೀಗುರು ವಿಭೂತಿಯ ಪಟ್ಟವ ಕಟ್ಟಿ ಲಿಂಗಸ್ವಾಯತವಾಮಾಡಿದನಾಗಿ ಧನ್ಯಳಾದೆನು. ನಾನು ಜನ್ಮಕ್ಕೆ ಬಂದ ಕಾಲಕ್ಕೆ ಶ್ರೀ ಗುರುಗಳು ವಿಭೂತಿಯ ಪಟ್ಟಕಟ್ಟಿದರು. ಲಿಂಗದೀಕ್ಷೆ ಮಾಡಿದರು.ನನ್ನ ಬಾಳು ಧನ್ಯ. ಈ ವಚನದಲ್ಲಿ ವೀರಶೈವ ಲಿಂಗಾಯತದ ದೀಕ್ಷಾವಿಧಿ ನಡೆದುದರ ವಿಚಾರ ಇದೆ. ಮಹಾದೇವಿಯವರು ವೀರಶೈವ ಲಿಂಗಾಯತ ಕುಟುಂಬದಲ್ಲಿ ಜನಿಸಿ ತಾರುಣ್ಯದ ಆರಂಭದಲ್ಲಿ ದೀಕ್ಷೆ ಪಡೆದುದಕ್ಕೆ ಈ ವಚನ ಆಧಾರ. ಲಿಂಗ, ಜಂಗಮ ಪಾದೋದಕ ಪ್ರಸಾದ, ಸಜ್ಜನ ಸದ್ಭಕ್ತಿ ಸದ್ಗೋಷ್ಟಿ ಇವೆಲ್ಲವೂ ಗುರುವಿನ ಕರುಣ.

4) ಗುಣ ದೋಷ ಸಂಪಾದನೆಯ ಮಾಡುವನ್ನಕ್ಕ ಕಾಮದ ಒಡಲು ಕ್ರೋಧದ ಗೊತ್ತು . ಲೋಭದ ಇಕ್ಕೆ,
ಮೋಹದ ಮಂದಿರ. ಮದದ ಆವರಣ ಮತ್ಸರದ ಹೊದಿಕೆ ಆ ಭಾವವರತಲ್ಲದೆ ಚೆನ್ನಮಲ್ಲಿಕಾರ್ಜುನನ ಅರಿವುದಕ್ಕೆ ಇಂಬಿಲ್ಲ ಕಾಣಿರಣ್ಣಾ.

## ಪದಗಳ ಅರ್ಥ

ಸಂಪಾದನೆ -ಗಳಿಸು,
ಗೊತ್ತು-ಸ್ಥಳ,
ಇಕ್ಕೆ-ಮರಿ,
ಅರತು- ತುಂಬಿ
ಇಂಬು-ಅವಕಾಶ,

ಕಾಮ-ಅಶೆ, ವಾಂಛೇ, ಷಡ್ರಿಪುಗಳಲ್ಲಿ ಒಂದು.

## ವಚನದ ಅರ್ಥ

ಗುಣ ದೋಷ ಸಂಪಾದನೆಯ ಮಾಡುವನ್ನಕ್ಕ, ಕಾಮದ ಒಡಲು ಕ್ರೋಧದ ಗೊತ್ತು ಲೋಭದ ಇಕ್ಕೆ. ನಾವು ಎಲ್ಲಿಯವರೆಗೆ ಗುಣದೋಷ ಸಂಪಾದನೆ ಮಾಡುತ್ತೇವೋ ಅಲ್ಲಿಯವರೆಗೆ ಈದೇಹವು ಅರಿಷಡ್ವರ್ಗಗಳಿಗೆ ಆಲಯವಾಗಿರುತ್ತದೆ. ವಸ್ತುವಿನಲ್ಲಿ ಕಾಮ . ಅದು ಸಿಗದಿದ್ದಾಗ ಕ್ರೋಧ. ಸಿಕ್ಕಮೇಲೆ ನನ್ನಲ್ಲಿಯ ಇರಲಿ ಎನ್ನುವ ಲೋಭ. ಈ ಅರಿಷಡ್ವರ್ಗಗಳು ನಮ್ಮನ್ನು ಹಿಂಡಿ ಹೀರಿ ಹಿಪ್ಪೆ ಮಾಡಿಬಿಡುತ್ತವೆ. ದೇಹ, ಇಂದ್ರಿ ಯಗಳನ್ನು ನಿತ್ರಾಣಗೊಳಿಸಿ ನಮ್ಮನ್ನು ರೋಗ, ಸಾವು ದುಃಖಗಳಿಗೆ ತಳ್ಳಿ ಹೋಗಿ ಬಿಡುತ್ತವೆ. ಈದೇಹ ಇಂದ್ರಿಯಗಳಿಗೆ ರಾಗ,ಭೋಗ ಎಂದರೆ ಹಿರಿಹಿರಿ ಹಿಗ್ಗು. ಸಾಧನೆ ಅನುಭಾವ ತಪಸ್ಸು ಎಂದರೆ ಅಲಸ್ಯ, ನಿರ್ಲಕ್ಷ್ಯ. ಆದುದರಿಂದ ನಾವು ಎಷ್ಟು ವಿವೇಕ, ಎಚ್ಚರವಹಿಸಿದರೂ ಕಡಿಮೆಯೆ. ನಾವು ಗುಣದೋಷ ಕಳೆದುಕೊಳ್ಳುವ ದಾರಿಯಲ್ಲಿ ಹೊರಟಾಗ ನಾವು ಪರಿಪೂರ್ಣರಾಗುವ ಪಥದಲ್ಲಿ ಸಾಗುತ್ತೇವೆ.ಈದೇಹವು ಕೆಲವು ಗುಣಧರ್ಮಗಳನ್ನು ಪಡೆದುಕೊಂಡಿದೆ. ಮೋಹದ ಮಂದಿರ, ಮದದ ಆವರಣ, ಮತ್ಸರದ ಹೊದಿಕೆ. ಆ ಭಾವವರತಲ್ಲದೆ ಚೆನ್ನಮಲ್ಲಿಕಾರ್ಜುನನ ಆರಿವು ದಕ್ಕೆ ಇಂಬಿಲ್ಲ ಕಾಣಿರಣ್ಣ. ಕಿಚಕನಿಗೆ ಕಾಮ. ವಿಶ್ವಾಮಿತ್ರನಿಗೆ ಕೋಧ. ಕೌರವನಿಗೆ ಮದ . ಗಾಂಧಾರಿಗೆ ಕುಂತಿಯಲ್ಲಿ ಮತ್ಸರ. ದಶರಥನಿಗೆ ಮೋಹ. ಲೋಭ ಎಲ್ಲ ಮನುಷ್ಯರಲ್ಲೂ ಅಧಿಕವಾಗಿಯೆ ಇದೆ. ನಮಗೆ ವಿಷಯದಲ್ಲಿ ಮೋಹ, ನಮಗೆ ಅಧಿಕವಾಗಿಸಿಕ್ಕಾಗ ಮದ ಅಧಿಕಾರ, ಕೀರ್ತಿಇತರರಿಗೆ ದೊರೆತರೆ, ನಮಲ್ಲಿ ಆಗ ಮತ್ಸರ ಹುಟ್ಟುತ್ತದೆ.ಇದೆಲ್ಲವೂ ದೇಹಗುಣ. ಇದನ್ನು ನಾವು ದಾಟಬೇಕು. ನಾವು ಒಳ್ಳೆಯ ಕೆಲಸಗಳನ್ನು ಮಾಡಲೂ ದೇಹ ಬೇಕು. ಕೆಟ್ಟ ಕಾರ್ಯ ಮಾಡಲೂ ದೇಹ ಬೇಕು. ಆದರೆ ಲೋಕದಲ್ಲಿ ಎಲ್ಲರೂ ಕೆಟ್ಟ ಕಾರ್ಯಗಳನ್ನು ಮಾಡುವುದರ ಕಡೆಗೆ ಹೆಚ್ಚು ಒಲವು ತೋರುತ್ತಾರೆ. ಅಂದರೆ ನಮ್ಮ ಇಂದ್ರಿಯಗಳಿಗೆ ಕೆಟ್ಟದ್ದು ಬಹಳ ಬೇಗ ರುಚಿಸುತ್ತದೆ. ಕೆಟ್ಟದ್ದು ಮಾಡುವುದು ಬಹಳ ಸುಲಭ. ಒಳ್ಳೆಯ ಕಾರ್ಯ ಮಾಡಬೇಕಾದರೆ ಬಹಳ ಕಾಲ ಪ್ರಯತ್ನ, ಶ್ರಮ, ಸಾಧನೆ ಎಲ್ಲವನ್ನೂ ಮಾಡಬೇಕಾಗುತ್ತದೆ. ಕೆಟ್ಟದ್ದನ್ನು ಮಾಡಿದರೆ ನಾವು ಘೋರ ದುಃಖಗಳಿಗೆ ಪರಿಭವಗಳಿಗೆ ಮತ್ತೆಮತ್ತೆ ಬರ

ಬೇಕಾಗುತ್ತದೆ. ತಿಳಿದು ನೋಡಿದರೆ ನಮ್ಮನುನ ಅರಿಷಡ್ವರ್ಗಗಳು ಕೊಂದು ಕೂಗುತ್ತವೆ. ಆದರೂ ನಾವು ಈ ಅರಿಷಡ್ವರ್ಗಗಳನ್ನು ಬೆಳೆಸಿಕೊಳ್ಳುತ್ತಲೆ ಇದ್ದೇವೆ. ರಾಗಾದಿಗಳಿಲ್ಲಿ ಮತ್ತರಾಗಿ ನಾಶವಾಗುತ್ತಿದ್ದೇವೆ. ಒಳ್ಳೆಯದಕ್ಕೆ ಒಳ್ಳೆಯಫಲ ಇದ್ದರೂ ಅದು ಈ ಮನುಷ್ಯನಿಗೆ ಸಪ್ಪೆಯಾಗಿ ಕಾಣುತ್ತದೆ. ನಮ್ಮ ಇಂದ್ರಿಯಗಳ ಗುಣ, ಸ್ವಭಾವಗಳು ದೇಹಾಧೀನವಾಗಿರುತ್ತವೆ. ಈದೇಹವಾದರೋ ವಯೋಮಾನಕ್ಕನುಗುಣ ವಾಗಿ ವರ್ತಿಸುತ್ತಿರುತ್ತದೆ. ಈದೇಹವು ವೃದ್ಧಾಪ್ಯ, ರೋಗಗಳಿಗೆ ಬಹಳಬೇಗ ಸಾಗುತ್ತದೆ. ಇಂತಹ ದೇಹ ಪಡೆದಿರುವ ನಾವು ಬಹಳ ಎಚ್ಚರಿಕೆಯಿಂದ ಸಾಗಬೇಕಾಗುತ್ತದೆ. ಅದನ್ನೆ ಇಲ್ಲಿ  ಮಹಾದೇವಿಯವರು ಬಹಳಮಾರ್ಮಿಕವಾಗಿ ಬೋಧಿಸಿದ್ದಾರೆ. ನಿಜದಲ್ಲಿ ಈದೇಹಕ್ಕೆ ಮೂಲವೂ. ಪ್ರೇರಣೆಯೂ ಆದುದು ಒಳಗಿರುವ ಚೈತನ್ಯ.ಪ್ರಜ್ಞಾಸ್ವರೂಪನಾದ ಪ್ರಾಣ. ಈಪ್ರಾಣನ ಶ್ರೇಯಸ್ಸನ್ನು ನಾವು ಲಕ್ಷ್ಯದಲ್ಲಿರಿಸಿ ಕೊಂಡು ಹೆಜ್ಜೆ ಹಾಕಬೇಕು. ಈ ದೇಹದೊಳಗಿರುವ ಮನಸ್ಸು ಇಂದ್ರಿಯಗಳು ಹುಟ್ಟು ಸಾವಿನಲ್ಲಿ ಶೂನ್ಯವಾಗಿ ಹೊಸಹೊಸ ದೇಹಗಳನ್ನು ಪಡೆದು ಬರುತ್ತವೆ ಕಟ್ಟರೆಯಾಗುವಷ್ಟು ಸುಖ ಭೋಗಗಳನ್ನು ಅನುಭವಿಸಿದರೂ ಇವುಗಳಿಗೆ ತೃಪ್ತಿಯೆಂಬುದಿಲ್ಲ ಮತ್ತೆ ಮತ್ತೆ ರಾಗ, ಭೋಗಗಳನ್ನೆ ಅನುಭವಿಸಲು ವಿಷಯ, ಅರಿಷಡ್ವರ್ಗಗಳನ್ನೆ ಹಾಸಿ ಹೊದ್ದುಕೊಂಡು ಅದೇ ಸುಖವೆಂದು ವಿರಮಿಸುತ್ತವೆ. ಶ್ರೇಯಸ್ಸಿನ ಕಡೆಗೆ ಒಂದಿಷ್ಟೂ ವಿಚಾರ ಮಾಡುವುದಿಲ್ಲ. ಇದರಿಂದಾಗಿ ನಾವು ಮತ್ತೆ ಮತ್ತೆ ಪ್ರಪಂಚದಲ್ಲಿ ಸುತ್ತುತ್ತ ಇರಬೇಕಾಗುತ್ತದೆ.ಎಲ್ಲಿಯವರೆಗೆ ಇದುಸಾಕುಎಂದು ನಾವುರೋಸಿಹೋಗುವು ದಿಲ್ಲವೋ ಅಲ್ಲಿಯವರೆಗೆ ದೇಹದ ಬಯಕೆಗಳಿಗನುಗುಣವಾಗಿ ನಿತ್ಯ ಸತ್ತು ಹುಟ್ಟುವ ಜನ್ಮಗಳಲ್ಲಿ ಸುತ್ತುತ್ತೇವೆ. ಇದನ್ನು ಅರಿತ ಅಕ್ಕಮಹಾದೇವಿಯವರು ಈ ಇಂದ್ರಿಯಗಳು ಏನು ಎನ್ನು ವುದರ ಭಾಷ್ಯವನ್ನು ಈವಚನದಲ್ಲಿ ವಿವರಿಸಿದ್ದಾರೆ. ಎಲ್ಲಿನಮಗೆ ಅರಿವುಬೇಕು ಎಂದು ತುಡಿತ ಉಂಟಾಗುತ್ತದೆ, ಆಗನಮ್ಮ ಬದುಕು ಹುಟ್ಟು ಸಾವಿನ ಆಚೆ ಏನು? ಈದೇಹದ ಸುತ್ತುವಿಕೆಗೆ ದುಃಖಗಳಿಗೆ ಕಾರಣ ಏನು ತಿಳಿಯಲು ಪ್ರಯತ್ನಿಸುತ್ತದೆ. ಆಗ ಉತ್ತರವೂ ಸಿಗುತ್ತದೆ. ನಮಗೆ ಸತ್ಯದ ದರ್ಶನವೂ ಸಾಧ್ಯವಾಗುತ್ತದೆ. ರಾಗ ಭಾವಗಳು ಕಟ್ಟರೆಯಾದರೆ ಆಗ ಕೆಲವು ಕ್ಷಣ ಜಿಗುಪ್ಸೆ ಹುಟ್ಟುತ್ತದೆ. ಅದರೆ ಅವುಗಳು ನಮಗೆ ಅರುಚಿಯಾಗಿ, ಓಕರಿಕೆಯಾಗಿ ಅಸಹ್ಯ ಹುಟ್ಟಿಸಬೇಕು. ಆಗಮಾತ್ರ ಸತ್ಯ. ದರ್ಶನ.

5) ಗುರುವೆಂಬ ತೆತ್ತಿಗನು ಲಿಂಗವೆಂಬೆಂಬಲಗನು ಮನನಿಷ್ಠೆಯೆಂಬ ಕೈಯಲ್ಲಿ ಕೊಡಲು ಕಾದಿದೆ ಗೆಲಿದೆನು. ಕಾಮನೆಂಬವನ.
ಕ್ರೋಧಾದಿಗಳು ಕೆಟ್ಟು ವಿಷಯಂಗಳೋಡಿದವು. ಅಲಗು ಎನ್ನೊಳು ನಟ್ಟು ಆನಳಿದ ಕಾರಣ ಚೆನ್ನಮಲ್ಲಿಕಾರ್ಜುನಲಿಂಗವ ಮನದಲ್ಲಿ ಹಿಡಿದೆ.

## ಪದಗಳ ಅರ್ಥ

ತೆತ್ತಿಗ-ತಂದೆ, ಗುರು,
ಅಲಗು-ಖಡ್ಗ,
ನಿಷ್ಠೆ-ದೃಢ ಭಕ್ತಿಶ್ರದ್ಧೆ,
ಕಾಮ-ಮನ್ಮಥ,
ಕ್ರೋಧಾದಿಗಳು - ಅರಿಷಡ್ವರ್ಗಗಳು,
ಕೆಟ್ಟು -ನಾಶವಾಗು.
ಆನ್-ದೇಹಗುಣ

## ವಚನದ ಅರ್ಥ

ಗುರುವೆಂಬ ತೆತ್ತಿಗನು ಲಿಂಗವೆಂಬಲಗನು ಮನ ನಿಷ್ಠೆಯೆಂಬ ಕೈಯಲ್ಲಿ ಕೊಡಲು ಕಾದಿ ಗೆಲಿದೆನು ಕಾಮನೆಂಬವನ. ಗುರುವೆಂಬ ತಂದೆಯು ಲಿಂಗವೆನ್ನುವ ಖಡ್ಗವನ್ನು ನನ್ನ ಕೈಯಲ್ಲಿ ಕೊಡಲು, ಕಾಮ ಎನ್ನುವ ಶತ್ರುವನ್ನು ಗೆದ್ದೆನು.ಕ್ರೋಧಾದಿಗಳು ಕೆಟ್ಟು ವಿಷಯಂಗಳೋಡಿದವು. ಕಾಮಕೋಧ,ಲೋಭ,ಮೋಹ, ಮದ, ಮತ್ಸರ ಅರಿ ಷಡ್ವರ್ಗಗಳು ಮತ್ತು ಪಂಚವಿಷಯಗಳು ಹೆದರಿ ಪಲಾಯನ ಮಾಡಿದವು. ಯುದ್ಧದ ದಿಗ್ವಿಜಯವನ್ನಾಚರಿಸುತ್ತಿರುವಾಗ ಅಲಗು ಎನ್ನೊಳು ನಟ್ಟು ಆನಳಿದ ಕಾರಣ ಚೆನ್ನ ಮಲ್ಲಿಕಾರ್ಜುನಲಿಂಗವ ಮನದಲ್ಲಿ ಹಿಡಿದೆ. ಖಡ್ಗ ಎನ್ನೆದೆಯಲ್ಲಿ ಮುರಿದು ನೋವು ಕೊಡುವ ಕಾಲಕ್ಕೆ ನಾನು ಪರಮಾತ್ಮನೆ ನಿನ್ನನ್ನು ಮನದಲ್ಲಿ ದೃಢವಾಗಿ ಹಿಡಿದೆ. ಅಕ್ಕ ಮಹಾದೇವಿಯವರು ದೃಢಭಕ್ತಿ, ವೀರನಿಷ್ಠೆ ಧೈಯ್ಯ, ಕೆಚ್ಚನ್ನು ಈವಚನದಲ್ಲಿ ಅಮೋಘವಾಗಿ ಪ್ರಕಟಿಸಿದ್ದಾರೆ. ಸಾಧನಾಪಥದಲ್ಲಿ ಅವರ ವೀರ ವೈರಾಗ್ಯವು ಎಷ್ಟೊಂದು ಅಚಲವಾಗಿದೆ ಎಂಬುದು ಈ ವಚನದಿಂದ ತಿಳಿಯುತ್ತದೆ. ಅನುಭಾವಮಾರ್ಗ ಹೇಡಿ ಗಳಿಗಲ್ಲ.

ಅಲ್ಲಿ ಅಡ್ಡಿ, ವಿಘ್ನ ಅಪಾರ. ಅನುಭಾವಿಗಳು ಯಾವುದಕ್ಕೂ ಲೆಕ್ಕಿಸದೆ ಗುರಿ ಸಾಧಿಸಿಯೆ ಬಿಡುತ್ತಾರೆ. ಇಷ್ಟಲಿಂಗ ಭಕ್ತಿಯನ್ನು ಶತ್ರುವಿನ ಯುದ್ದದೊಂದಿಗೆ ಅಭೇದ ಮಾಡಿ ಚಿತ್ರಿಸಿದ್ದಾರೆ.ವೀರನು ಯುದ್ದದಲ್ಲಿ ಗೆದ್ದು ವಿಜಯ ಸಾಧಿಸಿದಂತೆ ಅನುಭಾವಿಗಳು ಭಕ್ತಿ ಜ್ಞಾನದಿಂದ ಪರಮಸತ್ಯವನ್ನು ಸಾಧಿಸಿಕೊಳ್ಳುತ್ತಾರೆ. ಇಲ್ಲಿ ಅರಿಷಡ್ವರ್ಗಗಳ ಶತ್ರುಗಳು. ಭಕ್ತಿಯೆ, ಯುದ್ದಗೆಲುವೆ ಪರಮ ಸತ್ಯ. ಖಡ್ಗವಿದ್ಯಾ ಗುರುವು ಖಡ್ಗವಿದ್ಯ ಹೇಳಿಕೊಡುವಂತೆ ಜ್ಞಾನಿಗುರುವು ಇಷ್ಟ ಲಿಂಗಭಕ್ತಿಯನ್ನು ಹೇಳಿಕೊಡುತ್ತಾರೆ. ಭಕ್ತ ಎನ್ನುವ ಯೋಧನು ಇಷ್ಟಲಿಂಗ ಎನ್ನುವ ಖಡ್ಗವಿಡಿದು,
ಏಕೋಭಾವ ಎನ್ನುವ ದೃಢಮನಸ್ಸಿನಿಂದ ಕಾಮ ಎನ್ನುವ ಶತ್ರುವನ್ನು ಹೋರಾಡಿ ಗೆದ್ದನು. ಕಾಮನ ಮಿತ್ರರಾದ ಕ್ರೋಧಾದಿಗಳು ಹೆದರಿ ಪಲಾಯನ ಮಾಡಿದವು. ಅರಿಷಡ್ವರ್ಗಗಳು ಪಲಾಯನ ಮಾಡಿದುದರಿಂದ ಶಬ್ದ,ಸ್ಪರ್ಶ ಇತರ ಪಂಚ ವಿಷ ಯಗಳು ಹೆದರಿ ಓಡಿದವು. ದೇಹಗುಣಗಳು ನಾಶವಾದುದರಿಂದ ಮನಸ್ಸು ಪರಮ ಸತ್ಯದಲ್ಲಿ ದೃಢವಾಗಿ ನೆಲೆಸಿತು. ನಾನು ಇಷ್ಟಲಿಂಗ ಭಕ್ತಿಯಲ್ಲಿ ಲೀನವಾದೆ.ಶರಣರ ಕಾಲ ವೀರಯುಗ.ಯುದ್ದಗಳ ಕಾಲ. ಯುದ್ದಗಳನ್ನು ಕಣ್ಣಾರೆ ಕಂಡಿದ್ದ ಕೇಳಿದ್ದ
ಅಕ್ಕಮಹಾದೇವಿಯವರು
ಭಕ್ತಿಯಲ್ಲೂ ವೀರಭಕ್ತಿ ಪ್ರಕಟಿಸಿದ್ದಾರೆ. ಅನುಭಾವ,ತ್ಯಾಗಜೀವನ. ಫಲಾ ಯನವಾದವಲ್ಲ. ಸಂಸಾರ ಈಸಲಾರದೆ ಆಧ್ಯಾತ್ಮಕ್ಕೆ ಓಡಿಬಂದವರಲ್ಲ ಶರಣರು . ಅವರು ಪರಮಸತ್ಯ ಕಾಣಲೆಂದೇ ಎಲ್ಲ ತ್ಯಾಗಮಾಡಿ ಬಂದ ಧೀರರು.

6) ಗೂಗೆ ಕಣ್ಣು ಕಾಣಲರಿಯದೆ ರವಿಯ ಬಯ್ವುದು.
ಕಾಗೆ ಕಣ್ಣು ಕಾಣಲರಿಯದೆ ಶಶಿಯ ಬಯ್ವುದು.
ಕುರುಡ ಕಣ್ಣು ಕಾಣಲರಿಯದೆ ಕನ್ನಡಿಯ ಬಯ್ವನು.
ಇವರ ಮಾತೆಲ್ಲವೂ ಸಹಜವೆ. ಸಂಸಾರದಲ್ಲಿ ಹೊದಕುಳಿಗೊಳುತ್ತ
ಶಿವನಿಲ್ಲ ಮುಕ್ತಿಯಿಲ್ಲ.ಹುಸಿಯೆಂದಡೆ ಸಹಜವೆ
ಚೆನ್ನಮಲ್ಲಿಕಾರ್ಜುನ.

ವಚನದ ಅರ್ಥ

ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ವುದು. ಗೂಗೆಗೆ ಹಗಲು ಕಣ್ಣು ಕಾಣುವು ದಿಲ್ಲ. ಅದು ಸೂರ್ಯ್ಯನನ್ನು ಬೈಯ್ಯುತ್ತದೆ.ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬಯ್ವು ದು. ಕಾಗೆ ರಾತ್ರಿಯಲ್ಲಿ ಕಣ್ಣು ಕಾಣದುದರಿಂದ ಅದು ಚಂದ್ರನನ್ನು ಬಯ್ವುದು. ಕುರುಡ ಕನ್ನಡಿಯ ಕಾಣಲರಿಯದೆ ಕನ್ನಡಿಯ ಬಯ್ವನು. ಕುರುಡ ಕನ್ನಡಿ ಬೈಯುತ್ತಾನೆ. ಇವರ ಮಾತೆಲ್ಲ ಸಹಜ.ನರಕ ಸಂಸಾರದಲ್ಲಿ ಹೊದಕುಳಿಗೊಳುತ್ತ ಶಿವನಿಲ್ಲ ಮುಕ್ತಿಯಿಲ್ಲ ಎಂದರೆ ನರಕದಲ್ಲಿಕ್ಕದೆ ಮಾಣ್ಬನೆ ? ಕೆಲವರು ಸಂಸಾರದಲ್ಲಿರುಚಿ ಕಂಡು ಇದೆ ನಿತ್ಯ ಉಳಿದುದೆಲ್ಲ ಅಸತ್ಯ ಎನ್ನುತ್ತಾರೆ ಅವರ ಮಾತೂ ಸಹಜವೆ. ಅದರೆ ಸತ್ಯವೆಂಬುದಿ ದೆಯಲ್ಲ. ಶಿವನಿಲ್ಲ ಮುಕ್ತಿಯಿಲ್ಲ ಎಂದು ಕೆಲವು ಚಿಂತಕರು ಹೇಳುತ್ತಾರೆ. ಅದು ಅವರಿಗೆ ಸಹಜ ಅಷ್ಟೆ .

ಇದು ಲೋಕೋಭಿನ್ನರುಚಿ,ವಿಚಾರ ಎನ್ನುವುದನ್ನು ಹೇಳುತ್ತದೆ. ಅವರ ವರ ವಿಚಾರ, ತರ್ಕ ಅವರವರಿಗೆ ಸರಿ. ಅವರವರಿಗೆ ಅದು ಸರಿ ಕೂಡ. ಆದರೆ ನಾನೆ ಸರಿ ಉಳಿದುದೆಲ್ಲವೂ ತಪ್ಪು ಎನ್ನು ವುದು ಸರಿಯಲ್ಲ. ಗೂಬೆಗೆ ಹಗಲು ಕಾಣುವು ದಿಲ್ಲ. ಕಾಗೆಗೆ ಇರುಳು ಕಾಣುವುದಿಲ್ಲ. ಗೂಬೆ ಸೂರನನ್ನು, ಕಾಗೆ ಚಂದ್ರನನ್ನು ಬೈಯ್ವುದು ಸಹಜ. ಹಾಗೆ ಕುರುಡ ಕನ್ನಡಿಯನ್ನು ನಿಂದಿಸಿದರೆ ಅದು ಕುರುಡನಿಗೂ ಸರಿ .ಸಂಸಾರ ನಡೆಸುವವರಿಗೆ ಸಂಸಾರವೆ ಸರಿ. ಅನುಭಾವದಲ್ಲಿದ್ದವರಿಗೆ ಅನು ಭಾವವೆ ಸರಿ. ದೃಷ್ಟಿಯಂತೆ ಸೃಷ್ಟಿ .ಇದರಲ್ಲಿ ಇನ್ನೊಬ್ಬರದೇನು ಬಡಿವಾರ. ಹಾಗೆ ಲೋಕದಲ್ಲಿ ನಾಸ್ತಿಕವಿಚಾರಧಾರೆಗಳಿವೆ ಇನ್ನೂ ಅನೇಕವಿಚಾರ ಚರ್ಚೆ, ಚಿಂತನೆಗ ಳಿವೆ . ಅದರಲ್ಲಿ ನಾಸ್ತಿಕ ವಿಚಾರಧಾರೆಯೂ ಒಂದು. ಅವರವರ ತರ್ಕ ಅವರವ ರಿಗೆ ಸರಿ,

7) ಗಂಗೆಯೊಡನಾಡಿದ ಘಟ್ಟ ಬೆಟ್ಟಂಗಳು ಕೆಟ್ಟ ಕೇಡನೋಡಿರಯ್ಯ.
ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟ ಕೇಡ ನೋಡಿರಯ್ಯ.
ಜೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಿರಯ್ಯ.
ಜ್ಞಾನಿಯೊಡನಾಡಿದ ಅಜ್ಞಾನಿ ಕೆಟ್ಟ ಕೇಡ ನೋಡಿರಯ್ಯ.
ಅಯ್ಯಾಪರಶಿವಮೂರ್ತಿ ಹರನ ನಿಮ್ಮ ಜಂಗಮಲಿಂಗದೊಡನಾಡಿ
ಎನ್ನ ಭವಾದಿಭವಂಗಳು ಕೆಟ್ಟ ಕೇಡ ನೋಡಿರಯ್ಯ,
ಚೆನ್ನಮಲ್ಲಿಕಾರ್ಜುನಾ.

**ವಚನದ ಅರ್ಥ**

ಗಂಗಾನದಿಯುಪರ್ವತ,ಬೆಟ್ಟ ಗುಡ್ಡಗಳಲ್ಲಿ ಹರಿಯುತ್ತದೆ. ಗಂಗಾನದಿಯ ಒಡನಾಟದಿಂದ ಬೆಟ್ಟ ಗುಡ್ಡಗಳ ಹೀನವೆಲ್ಲ. ಕಳೆದು ಅವು ಪವಿತ್ರ ಸ್ಥಳಗಳೆಂದು ಕರೆಸಿಕೊಳ್ಳುತ್ತವೆ. ಅಗ್ನಿಯೊಡನಾಡಿದ ಕಾಷ್ಟ್ರಂಗಳು ಕೆಟ್ಟ ಕೇಡ ನೋಡಿರಯ್ಯ. ಕಟ್ಟಿಗೆ,ಮರ,ಸೌದೆಗಳು ಬೆಂಕಿಯ ಸಂಗದಿಂದ ತಮ್ಮ ಹೀನವನ್ನೆಲ್ಲ ಕಳೆದುಕೊಳ್ಳುತ್ತವೆ ಕಟ್ಟಿಗೆಯ ಜಾತಿಕುಲಗಳು ಹೋದವು ಜ್ಯೋತಿ ಯೊಡನಾಡಿದ ಕತ್ತಲೆ ಕೆಟ್ಟ ಕೇಡನೋಡಿರಯ್ಯ. ಜ್ಯೋತಿಯಬೆಳಕಿನಿಂದಾಗಿ ಕತ್ತಲೆ ಓಡಿಹೋಗುತ್ತದೆ.ಜ್ಞಾನಿಯೊಡನಾಡಿದ ಅಜ್ಞಾನಿ ಕೆಟ್ಟ ಕೇಡ ನೋಡಿರಯ್ಯ. ಜ್ಞಾನಿಯ ಸಂಗದಿಂದ ಅಜ್ಞಾನಿಯ ಅಜ್ಞಾನ ದೂರವಾಗಿ ಅವನೂ ಲೋಕದಲ್ಲಿ ಗೌರವ ಪಡೆದುಕೊಳ್ಳುತ್ತಾನೆ. ಲೋಕದಲ್ಲಿ ಎಲ್ಲವೂ ಸಂಬಂಧದಮೇಲೆ ನಡೆದಿದೆ. ಅಭಿವೃ ದ್ಧಿಯೂ ಸಂಬಂಧದಿಂದ, ಅವನತಿಯೂ ಸಂಬಂಧದಿಂದ. ನಾಲ್ಕು ದೃಷ್ಟಾಂತಗ ಳನ್ನು ನೀಡಿ ಈಸಂಬಂಧಗಳು ಏಳಿಗೆಗೂ ಕಾರಣ ದುರಿತದ ನಾಶಕ್ಕೂ ಕಾರಣ ಎಂಬುದನ್ನು ವಿವರಿಸಿದ್ದಾರೆ. ಗಂಗಾನದಿ ಹಿಮಾಲಯದಲ್ಲಿ ಹುಟ್ಟುತ್ತದೆ. ಹಿಮಾಲಯದಿಂದ ಗಂಗಾನದಿಯೂ, ಗಂಗಾನದಿಯಂದ ಹಿಮಾಲಯವೂ ಹೆಸರು ಪಡೆದಿವೆ. ಗಂಗಾನದಿಯಿಂದಾಗಿ ಘಟ್ಟ ಬೆಟ್ಟಗಳೆಲ್ಲ ವಿಖ್ಯಾತವಾದವು . ಪವಿತ್ರವಾದವು. ಸೌದೆಗಳಿಗೆ ಅಗ್ನಿ ಹೊತ್ತಿತು. ಅಗ್ನಿ ಸೌದೆಯನ್ನು ಏನು ಮಾಡಿತು? ಆ ಕಟ್ಟಿಗೆ ಜಾತಿ ಯನ್ನು ಸುಟ್ಟುಹಾಕಿತು. ಅಗ್ನಿಗೆ ಹಾಕಿದ ಎಲ್ಲ ಜಾತಿಯಮರಗಳ ಹೆಸರು ಹೋಯಿತು . ಬೂದಿ ಉಳಿಯಿತು. ಇದು ಯಾವ ಜಾತಿಯ ಬೂದಿ ಎಂದು ಯಾರೂ ಕೇಳುವುದಿಲ್ಲ.ಎಲ್ಲಿ ಜೋತಿಯ ಪ್ರವೇಶವಾಯಿತು ಅಲ್ಲಿ ಕತ್ತಲೆ ಹೋಯಿತು. ಎಲ್ಲಿ ಜ್ಞಾನಿಯ ಆಗಮನವಾಯಿತು ಅಲ್ಲಿ ಅಜ್ಞಾನಿಗಳ ಅಜ್ಞಾನವೂ ಹೋಯಿತು. ಹಾಗೆ ಪರಮಾತ್ಮನೆ ಗುರು ಲಿಂಗ ಜಂಗಮದೊಡನಾಡಿ ನನ್ನ ಭವಗಳು ಹೋದವು. ಉತ್ತಮರು, ಮಹಾತ್ಮರ ಸಾನ್ನಿಧ್ಯದಿಂದ ನಮ್ಮ ದೋಷಗಳು ಹೋಗಿ ನಾವು ಪೂರ್ಣರಾಗುತ್ತೇವೆ ಎಂಬ ಅನುಭವ ಇಲ್ಲಿದೆ. ನಾವು ನಮ್ಮ ಬದುಕಿನಲ್ಲಿ ದುರಿತ, ಕೆಡುಕನ್ನು ನಾಶಮಾಡಿಕೊಂಡರೆ ಸಾಕು . ನಮ್ಮ ಜೀವನ ತಾನಾಗಿ ಬೆಳಗುತ್ತದೆ. ಎನ್ನು ವ ಹಿತ ನುಡಿ ಇಲ್ಲಿದೆ.

8)ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ
ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ
ನದಿಯ ಗುಂಪ ತಾವರೆ ಬಲ್ಲುದಲ್ಲದೆ
ಕಡೆಯಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ. ಪುಷ್ಪದ ಪರಿಮಳವ
ತುಂಬಿ ಬಲ್ಲುದಲ್ಲದೆ ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯ.
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ
ಈ ಕೋಣನ ಮೈಯ ಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯ.

## ಪದಗಳ ಅರ್ಥ

ಗುಂಪ-ವಿಸ್ತಾರ.
ನದಿ-ಕೆರೆ.
ಗುಂಪ-ಸೌಂದರ್ಯ
ಹೊನ್ನಾವರಿಕೆ-ಕಳೆ, ಕಸ,
ನೊರಜು-ಸೊಳ್ಳೆಯಂತಹ ಸಣ್ಣ ಕೀಟ. ಕಣ್ಣಿಗೆ ಬಂದು
ಮುತ್ತಿಕೊಳ್ಳುತ್ತದೆ.

## ವಚನದ ಅರ್ಥ

ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯ? ಆಕಾಶದ ವಿಸ್ತಾರ ಚಂದ್ರನಿಗೆ ಗೊತ್ತು. ಇದನ್ನು ಹದ್ದು ತಿಳಿಯಲಾರದು. ನದಿಯ ಗುಂಪ ತಾವರೆ ಬಲ್ಲುದಲ್ಲದೆ ಕಡೆಯಲ್ಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯ?ನದಿ ಎಂದರೆ ಇಲ್ಲಿ ಕೆರೆ, ಕೊಳ ಎಂದು ತೆಗೆದುಕೊಳ್ಳಬೇಕು,ತಾವರೆ ಹೂವಿಗೆ ಕೆರೆಯಚೆಲುವು ಗೊತ್ತು. ಆದರೆ ಇದುಅಂಚಿನಲ್ಲಿ ಬೆಳೆಯುವ ಸತ್ತೆಕಸ ಕಳೆಗೆ ತಿಳಿಯದು. ತಾವರೆಗೂ ಕೆರೆ ಕೊಳದಲ್ಲಿ ಬೆಳೆದು ಚೆಲುವು ಹೆಚ್ಚಿಸಿದರೆ ಸತ್ತೆಕಳೆ ಕೆರೆ, ಕೊಳದಲ್ಲಿ ಬೆಳೆದು ಅಂದ ಕೆಡಿಸುತ್ತದೆ. ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯ? ಹೂವಿನ ಪರಿಮಳವನ್ನು ತುಂಬಿ ತಿಳಿದಿದೆ. ಇದು ಸೊಳ್ಳೆಗೆ ತಿಳಿಯದು. ದುಂಬಿ ಹೂವಿನಲ್ಲಿ ಮಕರಂದ ಪಾನಮಾಡುತ್ತದೆ. ಆದರೆ ಸೊಳ್ಳೆ ನೊಣಗಳು ಪರಿಮಳಕ್ಕೆ ಬರದೆ ಕೊಳೆತು ನಾರುವ ದುರ್ಮಸನೆಗೆ ಬರುತ್ತವೆ. ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ

ಈ ಕೋಣನ ಮೈಯ ಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯ ಶರಣರ ವ್ಯಕ್ತಿತ್ವ ಶರಣರಿಗೆ ಮಾತ್ರಗೊತ್ತು. ನಿಮಗೆ ಗೊತ್ತು. ಅದರೆ ಕೋಣನ ರಕ್ತ ಹೀರಲು ಬರುವ ಸೊಳ್ಳೆಗೆ ತಿಳಿಯದು. ಈ ವಚನದಲ್ಲಿ ಶರಣರ ಹಿರಿಮೆಯನ್ನು ಕೊಂಡಾಡಲಾಗಿದೆ. ಶರಣರನ್ನು ಶರಣರೆ ಬಲ್ಲರು. ಇತರರು ತಿಳಿಯಲಾರರು. ಇದಕ್ಕೆ ನಾಲ್ಕು ದೃಷ್ಟಾಂತಗ ಳನ್ನು ನೀಡಿದ್ದಾರೆ. 1.ಚಂದ್ರ, ಹದ್ದು ದೃಷ್ಟಾಂತ. ಅಕಾಶದ ವಿಸ್ತಾರ ಮಹತ್ವ ಚಂದ್ರಗೆ ಗೊತ್ತು. ಇದನ್ನು ಹದ್ದು ತಿಳಿಯಲಾರದು. ಚಂದ್ರ ತನ್ನ ಬೆಳದಿಂಗಳಿನಿಂದ ಅಕಾಶದ ಚೆಲುವನ್ನು ಹೆಚ್ಚಿಸುತ್ತಾನೆ. ಹದ್ದು ಆಕಾಶದ ವಿಸ್ತಾರ ತಿಳಿಯಲಾರದು. ಅದು ಆಕಾಶದ ಅಂದವನ್ನು ಹೆಚ್ಚಿಸಲಾರದು. ಅಲ್ಲದೆ ಹದ್ದು ಎತ್ತರಕ್ಕೆ ಹಾರುವುದು ಚೆಲುವಿಗಾಗಿ ಅಲ್ಲ. ದುರ್ವಾಸನೆ ಗುರುತಿಸಿ ತನ್ನ ಆಹಾರ ಪತ್ತೆ ಹಚ್ಚಿಕೊಳ್ಳುವುದಕ್ಕೆ 2. ತಾವರೆ, ಕಳೆ ದೈಷ್ಟಾಂತ. ಕೆರೆಗೆ ತಾವರೆಯಿಂದ ಚೆಲುವು ಹೆಚ್ಚಿದರೆ ಕಳೆಯಿಂದ ಅಂದ ಕೆಡುತ್ತದೆ.ಕಳೆ,ಹದ್ದು ಗುಣಾತ್ಮಕವಾಗಿ ಹೀನ. ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ ಕಡೆಯಲ್ಲಿದ್ದಾಡುವ ನೊರಜು ಬಲ್ಲುದೆ ಅಯ್ಯ. ಹೂವಿನ ಪರಿಮಳ ತುಂಬಿ ಗೆಗೊತ್ತು. ಅದೆ ಸೊಳ್ಳೆಗೆ ಇಲ್ಲ. ಇದರ ಗುಣವೂ ಹೀನ. ಹಾಗೆ ಕೋಣಮತ್ತು ಸೊಳ್ಳೆ ದೃಷ್ಟಾಂತ ಕೋಣ ರೈತಾಪಿವರ್ಗಕ್ಕೆ ಸ್ವಲ್ಪವಾದರೂ ಅನುಕೂಲ.ಆದರೆ ಸೊಳ್ಳೆ ಜೀವನವೆ ದಂಡ, ಹಾಗೆ ಕೆಲವು ಹೀನಗುಣದವರಿಗೆ ಶರಣರ ನಿಜ ವ್ಯಕ್ತಿತ್ವ ತಿಳಿಯದು.

9)ಗಟ್ಟಿದುಪ್ಪ ತಿಳಿದುಪ್ಪಕ್ಕೆ ಭೇದ ಉಂಟೆ ಅಯ್ಯ. ?
ದೀಪಕ್ಕೆ ದೀಪ್ತಿಗೆ ಭೇದ ಉಂಟೆ ಅಯ್ಯ?
ಅಂಗಕ್ಕೆ ಆತ್ಮಕ್ಕೆ ಭಿನ್ನ ಉಂಟೆ ಅಯ್ಯ?
ಎನ್ನಂಗವನು ಶ್ರೀಗುರುವು ಮಂತ್ರವ ಮಾಡಿ ತೋರಿದನಾಗಿ
ಸಾವಯವಕ್ಕೆ ನಿರವಯಕ್ಕೆ ಭಿನ್ನವಿಲ್ಲಯ್ಯ.
ಚೆನ್ನಮಲ್ಲಿಕಾರ್ಜುನನ ಬೆರಸಿದವಳ ನೇನೆಂದು ನುಡಿಸುವಿರಯ್ಯ?

## ವಚನದ ಅರ್ಥ

ಗಟ್ಟದುಪ್ಪಕ್ಕೆ ತಿಳಿದುಪ್ಪಕ್ಕೆ ಭೇದಉಂಟೆ ಅಯ್ಯ? ದೀಪಕ್ಕೆ ದೀಪ್ತಿಗೆ ಭೇದ ಉಂಟೆ ಅಯ್ಯ. ಬೆಣ್ಣೆಗೂ ತುಪ್ಪಕ್ಕೂ ಭೇದವಿದೆಯೆ?ದೀಪಕ್ಕು,ಪ್ರಕಾಶಕ್ಕು ಭೇದವಿದೆಯೆ. ಅಂಗಕ್ಕೆ ಆತ್ಮಕ್ಕೆ ಭಿನ್ನ ಉಂಟೆ ಅಯ್ಯ? ಶರೀರಕ್ಕೂ ಆತ್ಮನಿಗೂ ಭಿನತ್ಸೆಯಿದೆಯೆ?

ಎನ್ನಂಗವನು ಶ್ರೀಗುರುವು ಮಂತ್ರವ ಮಾಡಿ ತೋರಿದನಾಗಿ ಸಾವಯವಕ್ಕೆ ನಿರವಯಕ್ಕೆ ಭಿನ್ನ ವಿಲ್ಲಯ್ಯ. ನನ್ನ ಶರೀರನ್ನು ಶ್ರೀಗುರುವು ದೀಕ್ಷಾಮಯಗೊಳಿಸಿ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಮಾಡಿದ್ದಾನೆ. ಆದುದರಿಂದ ಆತ್ಮನು ಈ ಅಂಗದಲ್ಲಿದ್ದರೂ ಈ ಅಂಗವು ಮಂತ್ರಮಯವಿದೆ. ಕಾರಣ ಈ ಅಂಗವು ಲೌಕಿಕಕ್ಕೆ ಬರುವುದಿಲ್ಲ. ಸಾವಯವಕ್ಕು ನಿರವಯಕ್ಕು ಭಿನ್ನವಿಲ್ಲಯ್ಯ. ನನ್ನ ಶರೀರವು ಮಂತ್ರಮಯ ವಿರುವುದರಿಂದ ಸಾವಯವ ನಿರವಯವ ಭಿನ್ನವೇನೂ ಅಲ್ಲ. ಈ ಶರೀರದ ಸುಳುಹು ಇರುವುದು ಚೆನ್ನಮಲ್ಲಿಕಾರ್ಜುನನಿಗಾಗಿಯೆ ಹೊರತು ಲೌಕಿಕಕ್ಕಾಗಿಯಲ್ಲ.ಚೆನ್ನ ಮಲ್ಲಿಕಾರ್ಜುನನ ಬೆರಸಿದವಳ ಏನೆಂದು ನುಡಿಸುವಿರಯ್ಯ. ನಾನು ಚೆನ್ನಮಲ್ಲಿಕಾ ರ್ಜುನನನ್ನು ಬೆರಸಿದವಳು. ಏನೆಂದು ಮಾತನಾಡಿಸುವಿರಿ. ಇಲ್ಲಿ ಮಾತನಾಡಲು ಏನೂ ಉಳಿದಿಲ್ಲ. ಇದು ನಿರಾಕಾರದ ಸಾಕಾರ ಸುಳುಹು.

10)ಗಿರಿಯಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೆ ನವಿಲು .
ಕೊಳನಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸ.
ಮಾಮರ ತಳಿತಲ್ಲದೆ ಸ್ವರಗೈವುದೆ ಕೋಗಿಲೆ.
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ.
ಎನ್ನದೇವ ಚೆನ್ನಮಲ್ಲಿಕಾರ್ಜುನಗಲ್ಲದೆ
ಅನ್ಯಕ್ಕೆಳಸುವುದೆ ಎನ್ನ ಮನ ಕೇಳಿರೇ ಕೆಳದಿಯರಿರಾ.

## ಪದಗಳ ಅರ್ಥ

ಗಿರಿ-ಬೆಟ್ಟ. ಮೊರಡಿಗುಡ್ಡ ಕೊರಕಲು. ಕಿರುವಳ್ಳ-ಸಣ್ಣಗುಂಡಿ.
ಸ್ವರಗೈ-ಹಾಡು.
ಭ್ರಮರ-ಜೇನು, ದುಂಬಿ.
ಅನ್ಯ-ಬೇರೆ . ಎಳಸು-ಆಶೆ ಮಾಡು. ತಳಿತು-ಚಿಗುರಿ

## ವಚನದ ಅರ್ಥ

ಗಿರಿಯಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೆ ನವಿಲು. ನವಿಲು ಬೆಟ್ಟಗುಡ್ಡದಲ್ಲಿ ಮಾತ್ರ ಆಡುತ್ತದೆ .ಕೊರಕಲು ಕಂದರಗಳಲ್ಲಿ ಆಡುವುದೆ? ಇಲ್ಲ. ಕೊಳನಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸ. ಹಂಸವು ಕೊಳದಲ್ಲಿ ಆಡುತ್ತದೆ. ಹಳ್ಳಕೊಳ್ಳದಲ್ಲಿ ಅಲ್ಲ. ಮಾಮರ

ತಳಿತಲ್ಲದೆ ಸ್ವರಗೈವುದೆ ಕೋಗಿಲೆ. ಮಾವಿನಮರ ಚಿಗುರಿದಾಗ ಮಾತ್ರ ಕೋಗಿಲೆ ಸ್ವರವೆತ್ತಿ ಹಾಡುತ್ತದೆ.ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ. ದುಂಬಿಯು ಅಂದರೆ ಜೇನುಹುಳುವು ಮಕರಂದ,ಪರಿಮಳವಿರುವ ಪುಷ್ಪಗಳಿಗೆ ಮಾತ್ರ ಹೋಗುತ್ತದೆ.ಎನ್ನದೇವ ಚೆನ್ನಮಲ್ಲಿಕಾರ್ಜುನಗಲ್ಲದೆ ಅನ್ಯಕ್ಕೆಳಸುವುದೆ ಎನ್ನ ಮನ ಕೇಳಿರೆ ಕೆಳದಿಯರಿರಾ. ನನ್ನ ಮನಸ್ಸು ಪರಮಾತ್ಮ ಚೆನ್ನಮಲ್ಲಿಕಾರ್ಜುನನಿ ಗಲ್ಲದೆ ಇನ್ನೊಂದಕ್ಕೆ ಆಶೆ ಮಾಡುವುದಿಲ್ಲ. ಗೆಳತಿಯರೆ ಕೇಳಿರಿ. ಸುಮ್ಮನೆ ನನ್ನನ್ನು ಲೌಕಿಕಕ್ಕೆ ಒತ್ತಾಯ ಮಾಡಬೇಡಿರಿ.

ಈ ವಚನದಲ್ಲಿ ನಾಲ್ಕುರೂಪಕಗಳಿವೆ. ಪರಮಾತ್ಮನನ್ನು ಮಾತ್ರ ನಾನು ಪತಿ ಯನ್ನಾಗಿ ಪಡೆಯುವವಳು. ಇನ್ನೊಬ್ಬ ಪುರುಷನನ್ನು ನಾನು ಪತಿಯಾಗಿ ಸ್ವೀಕರಿಸುವುದಿಲ್ಲ ಎಂಬುದನ್ನು ತಿಳಿಸಲು ನಾಲ್ಕು ಉಪಮೆಗಳನ್ನು ಕೊಟ್ಟಿದ್ದಾರೆ.ನಾಲ್ಕು ರೂಪಕಗಳು ಕೂಡ ಮನೋಜ್ಞವಾಗಿವೆ. ಪರಮಾತ್ಮನೆ ಬೇಕು ಎನ್ನುವುದಕ್ಕೆ ಅವರು ಬಳಸಿಕೊಂಡಿರುವ ಚಿತ್ರಗಳು ತುಂಬ ಪರಿಣಾಮಕಾರಿಯಾಗಿವೆ.ನವಿಲು ಎಲ್ಲಿ ಆಡು ತ್ತದೆ. ಬೆಟ್ಟ ಗುಡ್ಡ ಕಾಡು ಪರ್ವತ ಪ್ರದೇಶಗಳಲಿ ಗರಿಬಿಚ್ಚಿ ನರ್ತಿಸುತ್ತದೆ. ಅದು ಗರಿ ಬಿಚ್ಚಿ ಕುಣಿಯಲು ಪರ್ವತ ಪ್ರಾಂತಗಳೇ ಬೇಕು. ಇಲ್ಲದಲ್ಲಿ ಅದು ನರ್ತನ ಮಾಡು ವುದಿಲ್ಲ. ಹಂಸವೂ ಅಷ್ಟೆ. ಎಲ್ಲಿ ತಿಳಿಗೊಳ ಇದೆ. ಅಲ್ಲಿ ಅದು ಆಡುತ್ತದೆ. ಕೆಸರಿದ್ದಲ್ಲಿ ಅದು ಆಡುವುದಿಲ್ಲ. ತಿಳಿಗೊಳ, ತಾವರೆಯಿದ್ದಲ್ಲಿ ಆಡುತ್ತದೆ . ಹಾಗೆ ಪೂರ್ಣತೆ ಯಿರುವ ಪರಮಾತ್ಮನಿದ್ದಲ್ಲಿ ಮಾತ್ರ ನಾನಿರುವವಳು ಅವನೆ ನನ್ನ ನಲ್ಲ. ಕೋಗಿಲೆ ಎಲ್ಲಿ ಬಂದು ಕೂಡುತ್ತದೆ, ತಳಿತ ಮಾವಿನಚಿಗುರಿದ್ದಲ್ಲಿ ಬಂದು ಕೂಡುತ್ತದೆ, ಕುಹೂ ಕುಹೂ ಉಲಿಯುತ್ತದೆ. ಇನ್ನೊಂದು ಕಡೆ ಅದು ಹೋಗುವುದಿಲ್ಲ. ಎಲ್ಲಿ ಪರಿಮಳ, ಸುಗಂಧವಿದೆ ಅಲ್ಲಿಗೆ ಜೇನು ದುಂಬಿ ಹೋಗುತ್ತದೆ. ಹಾಗೆ ನಾನು ಪರಮಾತ್ಮನನ್ನೆ ಪತಿಯನ್ನಾಗಿ ಪಡೆಯುವವಳು.ಚೆನ್ನಮಲ್ಲಿಕಾರ್ಜುನನಲ್ಲದೆ ಅನ್ಯ ವಿಷಯ ನನ್ನ ಬಳಿ ತೆಗೆಯಬೇಡಿರಿ. ಅವರು ಈ ವಚನದಲ್ಲಿ ಬಳಸಿಕೊಂಡಿರುವ ರೂಪಕಗಳು ಕೂಡ ಸುಂದರ. ಚೆಂದ ದೃಷ್ಟಾಂತಗಳೆ ಆಗಿವೆ. ಈ ವಚನ ಚೆಂದ ರೂಪಕಾತ್ಮಕ ವಚನ. ಅಕ್ಕನವರು ಮಾತನಾಡಿದರೆ ಚೆಂದ ಭಾವಗೀತವೆ ಪ್ರಕಟವಾಗುತ್ತದೆ.

1)ಘನವ ಕಂಡೆ, ಅನುವ ಕಂಡೆ
ಆಯತ, ಸ್ವಾಯತ, ಸನ್ನಿಹಿತಸುಖವ ಕಂಡೆ, ಅರಿವರಿದು ಮರಹ ಮರೆದೆ
ಕುರುಹಿನ ಮೋಹ ಮೊರೆಗೆಡದೆ. ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ನರಿದು ಸೀಮೆ ಗೆಟ್ಟೆನು.

## ಪದಗಳ ಅರ್ಥ

ಘನ-ಪರಮಾತ್ಮ
ಅನು-ದಾರಿ,
ಆಯತ-ದೀಕ್ಷೆ
ಸ್ವಾಯತ-ನಿತ್ಯ ಪೂಜಾವಿಧಿ,ತಾನು ಪರಮಾತ್ಮನಾಗುವ ಪಥ,
ಸನ್ನಿಹಿತ-ಸಾಮೀಪ್ಯದಸುಖ
ಮರಹು-ಅಜ್ಞಾನ,
ಕುರುಹು-ಚುಳುಕು,ಇಷ್ಟಲಿಂಗ,

ಸೀಮೆಗೆಟ್ಟೆ-ಮಿತಿಯನ್ನು ದಾಟಿದೆ. ಬಯಲು ಹೊಂದಿದೆ

## ವಚನದ ಅರ್ಥ

ಘನವ ಕಂಡೆ .ಅನುವ ಕಂಡೆ ಆಯತ, ಸ್ವಾಯತ ಸನ್ನಿಹಿತ ಸುಖವ ಕಂಡ ಪರಮಾತ್ಮನನ್ನು ನೋಡಿದೆ. ಆ ಸುಳಿವನ್ನೂ ಕಂಡೆ. ಆಯತ ಸ್ವಾಯತ ಸನ್ನಿಹಿತಸುಖವ ಕಂಡೆ. ಪೂಜಿಸುವ ಮಗ್ನವಾಗುವ ಆನಂದಿಸುವ ಸರ್ವಸುಖವನ್ನು ಅನುಭವಿಸಿದೆ .ಅರಿದರಿದು ಮರಹಮರೆದೆ. ಕುರುಹಿನ ಮೋಹವನೀಡಾಡಿದೆ. ತಿಳಿದು ತಿಳಿದು ಮರಹನ್ನು ಮರೆತೆ . ಕುರುಹು ಏನಿದೆ ಈ ಇಷ್ಟಲಿಂಗ. ಇದರ ಮೋಹವನ್ನು ಕಳೆ ದುಕೊಂಡೆ .ಚೆಲ್ಲಾಡಿದೆ.
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ನರಿದು ಸೀಮೆಗೆಟ್ಟೆನು.
ಪರಮಾತ್ಮನೆ ನಿಮ್ಮನ್ನು ತಿಳಿದೆ ತಿಳಿದ ಸೀಮೆಯನ್ನು ದಾಟಿದೆ.
ಅಕ್ಕಮಹಾದೇವಿಯವರು ಇದೀಗ ಎರಡನೆಯ ಮಜಲು ಏರಿದ್ದಾರೆ.
ಘನವಕಂಡೆ. ಪರಮಾತ್ಮ ನನ್ನು ಅನುಭವಿಸಿದೆ. ಅನುವ ಕಂಡೆ. ಆ ಬೆಳಕಿನಲ್ಲಿ ನಡೆಯುವ ದಾರಿ ತಿಳಿಯಿತು.

ಆಯತ,ಸ್ವಾಯತ,ಸನ್ನಿಹಿತ,ಸುಖವಕಂಡೆ. ನಾನು ದೀಕ್ಷೆ ಪಡೆದೆ. ಅದನ್ನು ಉಪಾಸನೆ ಮಾಡುವ ದಾರಿ ತಿಳಿದೆ. ಅನುಭಾವ ಪಥದಲ್ಲಿ ಮುಂದುವರಿದೆ. ಪೂಜಾ ವಿಧಿವಿಧಾನಗಳೆಲ್ಲ ತಿಳಿದೆ. ಅದರ ಸುಖವನ್ನು ಅನುಭವಿಸಿದೆ. ಅರಿದರಿದು ಮರಹ ಮರೆದೆ.ಕುರುಹಿನ ಮೋಹವನೀಡಾಡಿದೆ. ತಿಳಿದು ತಿಳಿದು ಮರಹು ಏನು ಎಂದು ತಿಳಿದೆ. ಆ ಮರಹನ್ನು ದೂಡಿದೆ. ಇದುವರೆಗೆ ನಿತ್ಯ ಇಷ್ಟಲಿಂಗೋಪಾಸನೆಯಲ್ಲಿ ಇದ್ದೆ. ಅದರ ಮೋಹದಲ್ಲಿ ಸಿಕ್ಕಿದ್ದೆ. ಈಗ ಈ ಕುರುಹು ಏನಿದೆ ಅದರ ಮೋಹ ಹೋಯಿತು. ಆದು ಏನಿದ್ದರೂ ಪರಮಾತ್ಮನ ನಿಜದರ್ಶನದ ಒಂದು ಕೈದೀವಿಗೆ. ಅದೆ ಪರಮಾತ್ಮನಲ್ಲ. ಇದುವರೆಗೆ ಈ ಕುರುಹು ಇಷ್ಟಲಿಂಗವೆ ಪರಮಾತ್ಮ ಎಂದು ತಿಳಿದಿದ್ದೆ. . ಇದು ಕೇವಲ ಚುಳುಕು. ಇಷ್ಟಲಿಂಗದ ಕುರುಹು ಅದರ ನಿಜದರ್ಶನ.ಆ ದೊಡ್ಡದರ ಸೂಚಿತ ದರ್ಶನವಿದು. ಇದು ಬಯಲಲ್ಲು ಬಟ್ಟಬಯಲು